ಶ್ರೀ ಟಿ. ಎನ್. ನರಸಿಂಹಮೂರ್ತಿ (ಬಂದರು, ಮೀನುಗಾರಿಕೆ ಹಾಗೂ ವಸತಿ ಮತ್ತು ನಗರಾಭಿವೃದ್ಧಿ ಸಚಿವರು).—

(ಎ) ಬಂದಿದೆ

(ಬಿ) ಮುಲ್ಕಿ ಪಟ್ಟಣದ ಜನಸಂಖ್ಯೆಯು ೨೦,೦೦೦ಕ್ಕೂ ಕಡಿಮೆ ಇರುವುದರಿಂದ ಕೊಳವೆ ನೀರು ಸರಬರಾಜು ಯೋಜನೆಯಡಿಯಲ್ಲಿ ಬರುತ್ತದೆ. ಹೀಗಾಗಿ ಯೋಜನೆಯ ಪೂರ್ಣ ವೆಚ್ಚವನ್ನು ಸರ್ಕಾರವೇ ಭರಿಸುವುದಂ.

(ಸಿ) ಈ ವಿಷಯವು ಸರ್ಕಾರದ ಪರಿಶೀಲನೆಯಲ್ಲಿದೆ.

## ಗಂತ್ರಿಗೆ ಶಿಕ್ಷಣ–ಉಪನ್ಯಾಸಕರ ಸೇವೆಯಂನ್ನು ಖಾಯಂಂಗೊಳಿಸಂವುದಂ

೧೨೫೭. ಶ್ರೀ ಎಲ್. ಆರ್. ಶಿವರಾಮೇಗೌಡ (ನಾಗಮಂಗಲ).—ಮಾನ್ಯ ಶಿಕ್ಷಣ, ಯುವಜನ ಸೇವೆ, ಕ್ರೀಡೆ, ಕನ್ನಡ ಮತ್ತು ಸಂಸ್ಕೃತಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.—

(ಎ) ಗುತ್ತಿಗೆ ಶಿಕ್ಷಕರು ಮತ್ತು ಉಪನ್ಯಾಸಕರನ್ನು ಖಾಯಂಗೊಳಿಸುವ ಯೋಜನೆ ಸರ್ಕಾರಕ್ಕಿದೆಯೇ ?

(ಆ) ಹಾಗಿದ್ದಲ್ಲಿ ಯಾವಾಗ ತೀರ್ಮಾನ ಕೈಗೊಳ್ಳಲಾಗುವುದು ?

ಶ್ರೀ ಕೆ. ಹೆಚ್. ರಂಗನಾಥ್ (ಶಿಕ್ಷಣ ಯುವಜನ ಸೇವೆ: ಕ್ರೀಡೆ, ಕನ್ನಡ ಮತ್ತು ಸಂಸ್ಕೃತಿ ಮಂತ್ರಿಗಳು).—

(ಎ) ಇದೆ.

(ಆ) ಕರಡು ವಿಶೇಷ ನಿಯಮಾವಳಿಯನ್ನು ತಯಾರಿಸಲಾಗಿದೆ. ಇದನ್ನು ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆ (ಸೇವಾ ನಿಯಮ) ಹಾಗೂ ಕಾನೂನು ಇಲಾಖೆಗಳ ಅಭಿಪ್ರಾಯಂ ಪಡೆದಂ ಆದಷ್ಟು ಜಾಗ್ರತೆಯಾಗಿ ಆದೇಶ ಹೊರಡಿಸಲಾಗುತ್ತದೆ.

## ಹರಿಜನ ಗಿರಿಜನರಿಗೆ ನೀಡಲಾಗಿರಂವ ಮೀನಂ ಸಾಕಂವ ಕೆರೆಗಳ ಸಂಖ್ಯೆ

೧೧೫೫. ಶ್ರೀ ಕರಿಯಣ್ಣ (ಹೊಳೆಹೊನ್ನೂರು).— ಮಾನ್ಯ ಬಂದರು, ಮೀನುಗಾರಿಕೆ ಹಾಗೂ ವಸತಿ ಮತ್ತು ನಗರಾಭಿವೃದ್ಧಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸಂವರೆ.—

(ಎ) ರಾಜ್ಯದಲ್ಲಿ ಎಷ್ಟು ಜನ ಹರಿಜನ ಗಿರಿಜನರಿಗೆ ನೀಡಲಾಗಿರುವ ಮೀನಂ ಸಾಕುವ ಕೆರೆಗಳ ಸಂಖ್ಯೆ ಎಷ್ಟು ?

(ಆ) ಹಾಗಿದ್ದಲ್ಲಿ, ಇವರಿಗೆ ನೀಡಲಾಗಿರುವ ವಿಶೇಷ ಸವಲತ್ತುಗಳೇನು?

(ಇ) ಹಾಗಿಲ್ಲದಿದ್ದಲ್ಲಿ ಇವರಿಗೆ ಮೀನು ಸಾಕುವ ಕೆರೆಗಳನ್ನು ಕೊಡಲು ಯೋಜನೆಯೇನಾದರೂ ಇದೆಯೇ ?

ಶ್ರೀ ಟಿ. ಎನ್. ನರಸಿಂಹಮೂರ್ತಿ (ಬಂದರು, ಮೀನುಗಾರಿಕೆ, ವಸತಿ ಮತ್ತು ನಗರಾಭಿವೃದ್ಧಿ ಸಚಿವರು).

(ಎ) ೧೯೮೯-೯೦ನೇ ಸಾಲಿನಲ್ಲಿ ೮ ಕೆರೆಗಳನ್ನು ಮತ್ತು ಒಂದು ಜಲಾಶಯವನ್ನು ಆನುಕ್ರಮವಾಗಿ ಳಿಸಿ ಹರಿಜನ ಮತ್ತು ೨೦ ಗಿರಿಜನರಿಗೆ ಗುತ್ತಿಗೆಗೆ ನೀಡಲಾಗಿದೆ.

(ಆ) ಇವರಿಗೆ ನೀಡಲಾಗಿರುವ ವಿಶೇಷ ಸವಲತ್ತುಗಳು ಕೆಳಗಿನಂತಿವೆ.—

(೧) ಒಳನಾಡು ಮೀನುಗಾರಿಕೆಯಲ್ಲಿ ತರಬೇತಿ ಕೊಡಂವುದು.

(೨) ಮೀನುಗಾರಿಕೆ ಸಲಕರಣೆಗಳನ್ನು ರಿಯಾಯಿತಿ ದರದಲ್ಲಿ ಒದಗಿಸುವುದು : ಮತ್ತು

(೩) ಮೀನು ಅಭಿವೃದ್ಧಿ ಕೈಗೊಳ್ಳಲು ಕೆರೆಗಳನು ಗುತ್ತಿಗೆಗೆ ನೀಡಲಾಗಂತ್ತಿದೆ.

(ಇ) ಉದ್ಭವಿಸುವುದಿಲ್ಲ.